# ಒಲಿಂಪಿಕ್ ಕ್ರೀಡಾಜ್ಯೋತಿ



ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಯಾರು ಪದಕ ಗೆಲ್ಲುತ್ತಾರೋ, ಯಾರು ಸೋಲುತ್ತಾರೋ? ಆದರೆ, ಕೂಟಕ್ಕಾಗಿ ಚಾಂಪಿಯನ್‌ನಂತೆ ತಾಲೀಮು ನಡೆಸುತ್ತಿರುವವರಲ್ಲಿ ಮುಂಚೂಣಿಯಲ್ಲಿರುವ ಹೆಸರು ಸೈಕೊ ಹಷಿಮೊಟೊ. ಆಕೆ ಟೋಕಿಯೊ ಒಲಿಂಪಿಕ್ ಕೂಟದ ಸಂಘಟನಾ ಸಮಿತಿ ಅಧ್ಯಕ್ಷೆ. ಜಗತ್ತಿನ ಅತಿದೊಡ್ಡ ಕ್ರೀಡಾಜಾತ್ರೆಯನ್ನು ಯಶಸ್ವಿಯಾಗಿ ಸಂಘಟಿಸಲು ಟೊಂಕಕಟ್ಟಿ ನಿಂತಿರುವ ಮಹಿಳೆ. ಈ ಹುದ್ದೆಗೇರುವ ಮುನ್ನ ಜಪಾನ್ ಸರ್ಕಾರದಲ್ಲಿ ಸಚಿವೆಯಾಗಿದ್ದವರು. ಅದಕ್ಕೂ ಮೊದಲು? ಸ್ವತಃ ಒಲಿಂಪಿಕ್ ಕ್ರೀಡಾಪಟು ಆಗಿದ್ದವರು!

ಒಲಿಂಪಿಕ್ ಕ್ರೀಡಾಜ್ಯೋತಿಯ ಸ್ಮರಣಾರ್ಥ ಹಷಿಮೊಟೊ ಅವರ ತಂದೆ ಆಕೆಗೆ ಸೈಕೊ (ಜ್ಯೋತಿ) ಎಂದೇ ಹೆಸರಿಟ್ಟರು. 1964ರ ಟೋಕಿಯೊ ಒಲಿಂಪಿಕ್ ಕೂಟ ಶುರುವಾಗುವ ಐದು ದಿನಗಳ ಮುಂಚೆ ಆಕೆ ಜನಿಸಿದ್ದರು. 1984ರಿಂದ 1996ರವರೆಗೆ ನಡೆದ ಎಲ್ಲ ಒಲಿಂಪಿಕ್ ಕೂಟಗಳಲ್ಲಿ ಪಾಲ್ಗೊಂಡಿದ್ದ ಸೈಕೊ, ಸ್ಪೀಡ್ ಸ್ಕೇಟರ್ ಮತ್ತು ಟ್ರ್ಯಾಕ್ ಸೈಕ್ಲಿಸ್ಟ್. 1992ರ ಒಲಿಂಪಿಕ್ ಕೂಟದಲ್ಲಿ (1500 ಮೀ ಸ್ಪೀಡ್ ಸ್ಕೇಟಿಂಗ್) ಕಂಚಿನ ಪದಕವನ್ನೂ ಜಯಿಸಿದ್ದರು.

ಕ್ರೀಡಾಂಗಣದಿಂದ ಹೊರಬಿದ್ದ ಮೇಲೆ ರಾಜಕೀಯದತ್ತ ಒಲವು ತೋರಿದ ಅವರು, ಹೌಸ್ ಆಫ್ ಕೌನ್ಸಿಲರ್ಸ್‌ಗೆ ಆಯ್ಕೆಯಾಗುವ ಮೂಲಕ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡವರು. ಮದುವೆಯಾದ ಸೈಕೊ, ಮೊದಲ ಮಗು ಜನಿಸಿದಾಗ, ಆ ಮಗುವನ್ನು ಕರೆದುಕೊಂಡೇ ಕಚೇರಿಗೆ ಹೋಗುತ್ತಿದ್ದರು. ಅಲ್ಲಿ ಕಚೇರಿ ಸಿಬ್ಬಂದಿ ಆ ಮಗುವನ್ನು ನೋಡಿಕೊಳ್ಳುತ್ತಿದ್ದರು. ತಾವು ಅನುಭವಿಸಿದ ಈ ಕಷ್ಟದ ಮೂಲಕ ದುಡಿಯುವ ಅಮ್ಮಂದಿರ ನೋವನ್ನೂ ಅರಿತ ಅವರು, ಕರುಳಕುಡಿಗಳ ಆರೈಕೆಗಾಗಿ ಕೇಂದ್ರವನ್ನೂ ತೆರೆದವರು (ಆಕೆ ಜಪಾನ್ ಸರ್ಕಾರದ ಮಹಿಳಾ ಸಬಲೀಕರಣ ಸಚಿವೆಯಾಗಿದ್ದರು). ಜಪಾನ್‌ನಲ್ಲಿ ಮಾತೃತ್ವ ರಜೆ ಸೌಲಭ್ಯ ಆರಂಭಿಸಿದಾಗ ಅದರ ಮೊದಲ ಫಲಾನುಭವಿಯೂ ಇವರಾಗಿದ್ದರು. ಈಗ ಅವರಿಗೆ ಮಲಮಕ್ಕಳು ಸೇರಿದಂತೆ ಒಟ್ಟು ಆರು ಮಕ್ಕಳು.

ಸೈಕೊ ಅವರು ವಿವಾದದಿಂದ ಅತೀತರೇನೂ ಅಲ್ಲ. ಪುರುಷ ಸ್ಕೇಟರ್ ಕ್ರೀಡಾಪಟುವೊಬ್ಬರ ಜತೆ ಅವರು ಅನುಚಿತವಾಗಿ ವರ್ತಿಸಿದ್ದರು ಎಂಬ ಆರೋಪ ಅವರ ಮೇಲಿದೆ. ಈ ಆರೋಪಕ್ಕೆ ಪೂರಕವಾಗಿ ಜಪಾನ್ ಮಾಧ್ಯಮದಲ್ಲಿ ಚಿತ್ರಗಳೂ ಪ್ರಕಟವಾಗಿವೆ.

ಕೋವಿಡ್ ಸಾಂಕ್ರಾಮಿಕದ ಅಬ್ಬರ ಹೆಚ್ಚಾಗಿರುವ ಈ ಹಂತದಲ್ಲಿ ಒಲಿಂಪಿಕ್ ಕೂಟವನ್ನು ನಡೆಸುವುದು ಬೇಡ ಎಂಬ ಒತ್ತಡ ಜಗತ್ತಿನ ಎಲ್ಲ ಕಡೆಗಳಿಂದ ತೀವ್ರಗೊಳ್ಳುತ್ತಿದೆ. ಆದರೆ, ಆ ಒತ್ತಡದ ಬಿರುಗಾಳಿಗೆ ಸೈಕೊ ಅವರ ಕೂಟ ನಡೆಸುವ ಸ್ಫೂರ್ತಿಯ ‘ಜ್ಯೋತಿ’ಯೇನೂ ನಂದಿಲ್ಲ. ಬದಲಾಗಿ ಅದರ ಜ್ವಾಲೆ ಇನ್ನಷ್ಟು ತೀವ್ರಗೊಳ್ಳುತ್ತಿದೆ. ‘ಯಾರು, ಎಷ್ಟೇ ಒತ್ತಾಯ ಹಾಕಿದರೂ ಕೂಟವನ್ನು ರದ್ದುಗೊಳಿಸುವುದಿಲ್ಲ’ ಎಂದು ಖಚಿತ ಧ್ವನಿಯಲ್ಲಿ ಹೇಳುತ್ತಿದ್ದಾರೆ.

ಜಪಾನ್‌ನಲ್ಲೂ ಈಗ ಸಾಂಕ್ರಾಮಿಕದ ಅಬ್ಬರ ಹೆಚ್ಚಾಗಿದೆ. ಹೀಗಾಗಿ ಅಮೆರಿಕ, ಜಪಾನ್ ಪ್ರವಾಸವನ್ನು ಮುಂದಕ್ಕೆ ಹಾಕಬೇಕು ಎಂದು ತನ್ನ ಪ್ರಜೆಗಳಿಗೆ ಕಿವಿಮಾತು ಹೇಳಿದೆ. ಅಮೆರಿಕ ನೀಡಿರುವ ‘ಟ್ರಾವೆಲ್ ಅಡ್ವೈಸರಿ’ಗೂ ಕೂಟದ ಆಯೋಜನೆಗೂ ಯಾವುದೇ ಸಂಬಂಧವಿಲ್ಲ. ‘ಅಲ್ಲಿನ ಆಡಳಿತದಿಂದ ನಮಗೆ ಎಲ್ಲ ರೀತಿಯ ಸಹಕಾರ ಇದೆ. ಕೂಟವನ್ನು ನಡೆಸಿಯೇ ಸಿದ್ಧ’ ಎಂದು ಸೈಕೊ ಹೇಳುತ್ತಾರೆ. ಕ್ರೀಡಾಗ್ರಾಮದಲ್ಲಿ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಿದ್ದು, ಕೋವಿಡ್ ಸುರಕ್ಷಾ ಮಾರ್ಗಸೂಚಿಯನ್ನು ಪಾಲನೆ ಮಾಡಲಾಗುತ್ತದೆ ಎಂದು ಭರವಸೆ ನೀಡುತ್ತಾರೆ.

‘ಕೂಟಕ್ಕೆ ಬರುವ ಪ್ರತಿಯೊಬ್ಬ ಕ್ರೀಡಾಪಟುವಿಗೂ ಲಸಿಕೆ ಹಾಕಲಾಗುತ್ತದೆ. ಎಲ್ಲರ ಸುರಕ್ಷತೆಗೆ ನಮ್ಮ ಸಂಘಟನಾ ಸಮಿತಿ ಭರವಸೆ ನೀಡುತ್ತದೆ. ಜಗತ್ತಿನ ಎಲ್ಲ ಕ್ರೀಡಾಪಟುಗಳು ಈ ಅತಿದೊಡ್ಡ ಕ್ರೀಡಾ ಉತ್ಸವಕ್ಕೆ ನಿಶ್ಚಿಂತರಾಗಿ ಬರಬಹುದು’ ಎಂದು ಆಕೆ ಹುರಿದುಂಬಿಸುತ್ತಾರೆ. ‘ಕೂಟ ನಡೆಸಲು ಸ್ಥಳೀಯರಿಂದ ಸಣ್ಣ ಪ್ರಮಾಣದ ವಿರೋಧ ಇರುವುದು ನಿಜ. ಸುರಕ್ಷತೆ ಕುರಿತು ನಾವು ಅವರಿಗೆಲ್ಲ ಮನವರಿಕೆ ಮಾಡಿಕೊಡುತ್ತೇವೆ. ಎಲ್ಲ ಆಗುಹೋಗುಗಳನ್ನು ಅವರ ಗಮನಕ್ಕೆ ತರುತ್ತೇವೆ’ ಎಂದು ನಾಯಕತ್ವದ ಗುಣ ತೋರುತ್ತಾರೆ. ಆದರೆ, ದೇಶದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ಟೋಕಿಯೊ ನಗರವೂ ಸೇರಿದೆ. ಟೋಕಿಯೊ ಒಲಿಂಪಿಕ್ ಕೂಟಕ್ಕೆ ಎಂಟು ವರ್ಷಗಳಿಂದ ತಯಾರಿ ನಡೆಯುತ್ತಿದೆ. ಅಲ್ಲಿನ ಸರ್ಕಾರ ಕೂಟದ ವ್ಯವಸ್ಥೆಗಾಗಿ ಇದುವರೆಗೆ 154 ಕೋಟಿ ಡಾಲರ್ ಹಣವನ್ನು ವ್ಯಯಿಸಿದೆ.

ಟೋಕಿಯೊ ಒಲಿಂಪಿಕ್ ಕೂಟ ಸಂಘಟನಾ ಸಮಿತಿಗೆ ಮೊದಲು ಅಧ್ಯಕ್ಷರಾಗಿದ್ದವರು ಯೊಷಿರೊ ಮೋರಿ. ಅವರು ಈ ಹಿಂದೆ ಜಪಾನ್‌ನ ಪ್ರಧಾನಿಯೂ ಆಗಿದ್ದವರು. ಆದರೆ, ಸಮಿತಿಯ ಸಭೆಯಲ್ಲಿ ‘ಮಹಿಳೆಯರು ಬರೀ ವಾಚಾಳಿಗಳು’ ಎಂದು ಸ್ತ್ರೀವಿರೋಧಿ ಹೇಳಿಕೆ ನೀಡಿ, ವಿವಾದಕ್ಕೆ ಸಿಲುಕಿದ ಯೊಷಿರೊ ಹುದ್ದೆಗೆ ರಾಜೀನಾಮೆ ನೀಡಬೇಕಾಯಿತು. ಆಗ ಆ ಸ್ಥಾನಕ್ಕೆ ಏರುವ ಅವಕಾಶವನ್ನು ಪಡೆದವರು ಸೈಕೊ. ಪುರುಷರೇ ಹೆಚ್ಚಾಗಿದ್ದ ಆಡಳಿತ ಮಂಡಳಿಯಲ್ಲಿ ಯೊಷಿರೊ ಅವರ ಸ್ಥಾನವನ್ನು ಮತ್ತೊಬ್ಬ ಪುರುಷನೇ ತುಂಬಬೇಕೆಂಬ ಒತ್ತಾಯ ಹೆಚ್ಚಾಗಿತ್ತು. ಆದರೆ, ಪ್ರತಿಕೂಲ ವಾತಾವರಣದಲ್ಲೂ ಸೈಕೊ, ಆ ಹುದ್ದೆಗೆ ಏರಿ ಸೈ ಎನಿಸಿಕೊಂಡರು.

ಈಗ ಎಲ್ಲ ವಿರೋಧದ ನಡುವೆ ಅವರು ಕೂಟವನ್ನು ಸಂಘಟಿಸಲು ಯಶಸ್ವಿಯಾಗುತ್ತಾರೆಯೇ? ಕೂಟ ಸಂಘಟಿಸಿದರೂ ಅದು ಸುರಕ್ಷಿತವಾಗಿರುತ್ತದೆಯೇ? ಉತ್ತರಕ್ಕೆ ಹೆಚ್ಚು ದಿನ ಕಾಯಬೇಕಿಲ್ಲ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65